ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 477 ವೆಚ್ಚ 6/2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:24.9.2019

## ಸುತ್ತೋಲೆ

ವಿಷಯ: ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮತ್ತು ಅವುಗಳ ವ್ಯಾಪ್ತಿಯ ಇತರೆ ಇಲಾಖೆಗಳ ವೇತನ ವೆಚ್ಚಕ್ಕಾಗಿ ಹೆಚ್ಚುವರಿ ಅನುದಾನ ಕೋರಿ ಸಲ್ಲಿಸುತ್ತಿರುವ ಪ್ರಸ್ತಾವನೆಗಳ ಬಗ್ಗೆ

ಉಲ್ಲೇಖ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆರವರ ಅಧ್ಯಕ್ಷತೆಯಲ್ಲಿ ದಿನಾಂಕ:7.9.2019ರಂದು ನಡೆದ ಸಭೆಯ ನಿರ್ಣಯದಂತೆ

ಇತ್ತೀಚೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹೊರಡಿಸಿರುವ ಸುತ್ತೋಲೆಯನ್ವಯ ಯಾವುದೇ ಕಾರಣಕ್ಕೂ ನೌಕರರ ವೇತನವನ್ನು ಪ್ರತಿ ತಿಂಗಳೂ ಪಾವತಿಸದಿದ್ದ ಪಕ್ಷದಲ್ಲಿ ಹಾಗೂ ವೇತನವನ್ನು 5ನೇ ತಾರೀಖಿನೊಳಗೆ ನೌಕರರುಗಳಿಗೆ ಪಾವತಿಸದಿದ್ದಲ್ಲಿ ಸಂಬಂಧಿಸಿದ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಜವಾಬ್ದಾರರಾಗಿರುತ್ತಾರೆ ಎಂಬ ಸೂಚನೆಯನ್ನು ನೀಡಿರುತ್ತಾರೆ.

ಆಯವ್ಯಯವನ್ನು ತಯಾರಿಸುವ ವೇಳೆಯಲ್ಲಿ ಹೆಚ್.ಆರ್.ಎಂ.ಎಸ್. ಅಂಕಿ ಅಂಶಗಳ ಆಧಾರದ ಮೇಲೆ ಅಂದರೆ ಆಗಸ್ಟ್ – ಅಕ್ಟೋಬರ್ ರವರೆಗಿನ ವೆಚ್ಚವನ್ನಾಧರಿಸಿ ವಾರ್ಷಿಕ ವೆಚ್ಚಕ್ಕೆ 15 ದಿನಗಳ ಗಳಿಕೆ ರಜೆ ನಗದೀಕರಣ ಮತ್ತು ಮುಂದಿನ ಆರ್ಥಿಕ ವರ್ಷದಲ್ಲಿ ಮಂಜೂರು ಮಾಡಬಹುದಾದ ತುಟ್ಟಿಭತ್ಯೆ ಹೆಚ್ಚಳವನ್ನು ಅಂದಾಜಿಸಿ ವೇತನಾಂಶಕ್ಕೆ ಅನುದಾನವನ್ನು ಒದಗಿಸಲಾಗುತ್ತದೆ. ಆದಾಗ್ಯೂ ಬಹುತೇಕ ಇಲಾಖೆಗಳು ವೇತನ ವೆಚ್ಚಕ್ಕಾಗಿ ಹೆಚ್ಚುವರಿ ಅನುದಾನವನ್ನು ಕೋರಿ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿ ಕಳೆದ ವರ್ಷಾಂತ್ಯದಲ್ಲಿ ಅನುದಾನ ಲಭ್ಯವಿದ್ದರೂ ವೇತನವನ್ನು ಸೆಳೆಯದೆ ವ್ಯಪಗತವಾಗುತ್ತಿರುವುದು ಕಂಡುಬಂದಿರುತ್ತದೆ. ಸರ್ಕಾರ ಅನುದಾನ ಒದಗಿಸಿದ್ದರೂ ಬಳಸದೆ ವ್ಯಪಗತಗೊಳಿಸುವುದು ಖಂಡನೀಯ. ಹೆಚ್ಚುವರಿ ಅನುದಾನವನ್ನು ಕೋರಲು ಪಾಲಿಸಬೇಕಾದ ಹಾಗೂ ಸಲ್ಲಿಸಬೇಕಾದ ಮಾಹಿತಿ/ಸ್ಪಷ್ಟೀಕರಣದ ಬಗ್ಗೆ ಈಗಾಗಲೇ ಸುತ್ತೋಲೆ ಸಂಖ್ಯೆ: ಆಇ 321 ವೆಚ್ಚ 6/2019 ದಿನಾಂಕ:29.5.2019ರನ್ನು ಹೊರಡಿಸಿದೆ. ಆದಾಗ್ಯೂ ವಿಶೇಷವಾಗಿ ಶಿಕ್ಷಣ ಇಲಾಖೆಯ ಬೋಧಕ/ಬೋಧಕೇತರ ಸಿಬ್ಬಂದಿಯವರುಗಳ ವೇತನ ಪಾವತಿಯಲ್ಲಿ ಬಹಳ ವಿಳಂಬವಾಗುತ್ತಿರುವುದು ಅಂದರೆ 3–4 ತಿಂಗಳಿಗೊಮ್ಮೆ ಕೆಲವು ಕಡೆ ಪಾವತಿಸುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಸ್ವೀಕೃತವಾಗುತ್ತಿದೆ. ಇದರಿಂದ ನೌಕರರ ಜೀವನ ನಿರ್ವಹಣೆಗೆ ತೊಂದರೆಯಾಗುತ್ತದೆ ಹಾಗೂ ಇದು ಅವರ ಸೇವೆಯಲ್ಲಿ ಅಡಚಣೆ ಉಂಟಾಗುತ್ತದೆ.

ಹೆಚ್ಚುವರಿ ಕೋರಿ ಸ್ವೀಕೃತವಾಗುತ್ತಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿ ಕಳೆದ ಆರ್ಥಿಕ ವರ್ಷಾಂತ್ಯದ (2018–19ನೇ ಸಾಲಿನ) ಮಾಹೆಗಳು ಅಂದರೆ ಡಿಸೆಂಬರ್ 2018, ಜನವರಿ 2019 ಮತ್ತು ಫೆಬ್ರವರಿ 2019 ಮಾಹೆಗಳ ವೇತನವನ್ನು ಪ್ರಸಕ್ತ ಸಾಲಿನಲ್ಲಿ 2019–20ನೇ ಆರ್ಥಿಕ ಸಾಲಿನಲ್ಲಿ ಸೆಳೆದಿರುವುದು ಕಂಡು ಬಂದಿರುತ್ತದೆ ಹಾಗೂ ಪ್ರಸಕ್ತ ಸಾಲಿನಲ್ಲಿಯೂ ಕೊರತೆಯಾಗಲು ಕಾರಣವಾಗಿದೆ. ಇಷ್ಟಲ್ಲದೆ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ನಿಧಿಗಳಲ್ಲಿ ವೆಚ್ಚವಾಗದೆ ಉಳಿದಿರುವುದು ಕಂಡುಬಂದಿರುತ್ತದೆ.

ಅಧಿಕಾರಿ/ಸಿಬ್ಬಂದಿಯವರುಗಳ ವೇತನಕ್ಕೆ ಯಾವುದೇ ಕಾರಣದಲ್ಲಿಯೂ ತೊಂದರೆಯಾಗಬಾರದೆಂಬ ದೃಷ್ಟಿಯಿಂದ ಮುಂಚಿತವಾಗಿಯೇ ಅನುದಾನವನ್ನು ಬಿಡುಗಡೆಗೊಳಿಸಿ, ಅನುದಾನ ಲಭ್ಯವಿದ್ದರೂ ಸೆಳೆಯದಿರುವುದು ಕಂಡುಬರುತ್ತದೆ. ಇದೂ ಅಲ್ಲದೆ ಹೆಚ್ಚುವರಿ ಅನುದಾನ ಕೋರುವ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ನೀಡುವ ಸಮರ್ಥನೆಗಳು ಸಮಂಜಸವಾಗಿರುವುದಿಲ್ಲ. ಇದರಿಂದ ಪ್ರಸ್ತಾವನೆಯನ್ನು ಪರಿಗಣಿಸಲು ಅನಗತ್ಯ ವಿಳಂಬವಾಗುತ್ತದೆ.

ಈ ಬಗ್ಗೆ ಖಜಾನೆಗಳಿಂದ ಸ್ವೀಕೃತವಾಗಿರುವ ಅಂಕಿ ಅಂಶಗಳನ್ನು ಪರಿಶೀಲಿಸಲಾಗಿ ಆರ್ಥಿಕ ವರ್ಷಾಂತ್ಯದಲ್ಲಿ ಅನುದಾನಗಳು ವೆಚ್ಚವಾಗದೆ ವ್ಯಪಗತವಾಗುತ್ತಿರುವುದನ್ನು ಗಮನಿಸಿದೆ. ಈ ವ್ಯಪಗತವಾಗುವ ಅನುದಾನದ ಬಗ್ಗೆ ಮಹಾಲೇಖಪಾಲರ ಆಕ್ಷೇಪಣೆಗೆ ಗುರಿಯಾಗಬೇಕಾಗುತ್ತದೆ.

ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡಂತೆ ರಾಜ್ಯದ ಎಲ್ಲಾ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಸಿಸಿಒ, ಸಿಒ ಮತ್ತು ಡಿಡಿಒಗಳು ವೇತನದ ಬಿಲ್ಲುಗಳ ತೀರುವಳಿಗೆ ವಿಶೇಷ ಗಮನಹರಿಸಿ ಕ್ರಮವಹಿಸತಕ್ಕದ್ದು.

1. ಯಾವುದೇ ಕಾರಣಕ್ಕೂ ಎಲ್ಲಾ ಸಿಬ್ಬಂದಿಯವರ ತಿಂಗಳ ವೇತನವನ್ನು ಸೆಳೆಯಲು ವಿಳಂಬ ಮಾಡತಕ್ಕದ್ದಲ್ಲ. ಅನುದಾನ ಕೊರತೆಯಾಗಿದ್ದಲ್ಲಿ ದಿನಾಂಕ:29.5.2019ರ ಸುತ್ತೋಲೆಯಲ್ಲಿ (available in Finance Department's website) ನಿಗದಿಪಡಿಸಿರುವ ಅನುಬಂಧದಲ್ಲಿ ಸಂಬಂಧಪಟ್ಟ ಆದೇಶದ ಪ್ರತಿ ಹಾಗೂ ಲೆಕ್ಕಾಚಾರ ಪಟ್ಟಿಗಳೊಡನೆ ಕೂಡಲೇ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು. ದೋಷಪೂರಿತ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಯತಕ್ಕದ್ದು.

2. ಅನುದಾನ ಲಭ್ಯವಿದ್ದರೂ ಅನುದಾನ ಲಭ್ಯವಿಲ್ಲವೆಂದು ನೌಕರರ ವೇತನವನ್ನು ಸೆಳೆಯದಿರುವುದನ್ನು ಕರ್ತವ್ಯ ಲೋಪವೆಂದು ಪರಿಗಣಿಸಲಾಗುತ್ತದೆ. ಸಿಸಿಒ/ಸಿಒ ಗಳು ಬಿಡುಗಡೆ ಮಾಡದೆ ಅವರಲ್ಲಿಯೇ ಅನುದಾನ ಉಳಿಸಿಕೊಂಡಿರುವುದು ಕಂಡು ಬಂದಿರುತ್ತದೆ. ಡಿಡಿಒ ವಾರು ಸರ್ಕಾರದ ಆದೇಶದಲ್ಲಿದ್ದಂತೆ ಅಷ್ಟು ತಿಂಗಳುಗಳಿಗೂ ಅನುದಾನ ಬಿಡುಗಡೆ ಮಾಡಬೇಕು. ಪ್ರತಿ ತಿಂಗಳೂ ಪ್ರತ್ಯೇಕವಾಗಿ ಬಿಡುಗಡೆ ಮಾಡುವುದು ಸರಿಯಾದ ಕ್ರಮವಲ್ಲ.

3. ಅಧೀನ ಅಧಿಕಾರಿ/ಸಿಬ್ಬಂದಿಯವರುಗಳು ಆದಾಯ ತೆರಿಗೆ ವಿವರಗಳನ್ನು ಸಲ್ಲಿಸದ ಕಾರಣ ವೇತನವನ್ನು ಸೆಳೆಯದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸಂಬಂಧಿಸಿದ ವಿಷಯ ನಿರ್ವಾಹಕರು ವಾರ್ಷಿಕ ಪಾವತಿಸುವ, ಆದಾಯ ತೆರಿಗೆ ನಿಯಮಗಳಡಿ ನೀಡಬಹುದಾದ ವಿನಾಯಿತಿ ಹಾಗೂ ಪಾವತಿಸಬೇಕಾಗಿ ಆದಾಯ ತೆರಿಗೆಗಳನ್ನು ಕ್ಲುಪ್ತ ವೇಳೆಯಲ್ಲಿ ಲೆಕ್ಕಾಚಾರ ಮಾಡಿ, ಸಂಬಂಧಿದ ಅಧಿಕಾರಿ/ಸಿಬ್ಬಂದಿಯವರುಗಳು ನಿಗಧಿತ ವೇಳೆಯೊಳಗೆ ವಿವರಗಳನ್ನು ಸಲ್ಲಿಸದಿದ್ದಲ್ಲಿ ಲೆಕ್ಕಾಚಾರದಂತೆ ಕಟಾಯಿಸಿ ವೇತನವನ್ನು ಸೆಳೆಯುವುದು. ಇದರಲ್ಲಿ ವಿಳಂಬ/ಕಟಾಯಿಸಿ ಸಂಬಂಧಿಸಿದ ಇಲಾಖೆಗೆ ವರದಿಯನ್ನು ಸಲ್ಲಿಸದಿದ್ದಲ್ಲಿ ಸಂಬಂಧಿಸಿದ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳೇ ಪೂರ್ಣ ಹೊಣೆಗಾರರಾಗುತ್ತಾರೆ ಹಾಗೂ ನಿಯಮಾನುಸಾರ ಆದಾಯ ತೆರಿಗೆಯನ್ನು ಕಟಾಯಿಸದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನಿಯಮಗಳಲ್ಲಿ ಅವಕಾಶವಿರುತ್ತದೆ.

4. ವೇತನದ ಬಿಲ್ಲುಗಳನ್ನು ತಪ್ಪದೆ ಖಜಾನೆಗಳಿಗೆ ಪ್ರತಿ ತಿಂಗಳ ಕೊನೆಯ ವಾರದಲ್ಲಿ ದಿನಾಂಕ:26 ರಿಂದ 28ರೊಳಗೆ ಸಲ್ಲಿಸತಕ್ಕದ್ದು. ಕೆಲವು ಅಧಿಕಾರಿ/ಸಿಬ್ಬಂದಿಯವರುಗಳು ಕಾಯ್ದಿರಿಸಿದ ಅವಧಿಯ ವೇತನವನ್ನು ಸ್ಥಳ ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಆಯವ್ಯಯ ತಯಾರಿಕೆಯ ವೇಳೆಯಲ್ಲಿ ಲೆಕ್ಕಾಚಾರ ಮಾಡದಿದ್ದರೂ ಲಭ್ಯವಿರುವ ಅನುದಾನದಿಂದ ಸೆಳೆಯುತ್ತಿರುವುದು ಕಂಡು ಬರುತ್ತದೆ. ಇದರಿಂದ ಈ ಹಿಂದೆ ಕರ್ತವ್ಯ ನಿರ್ವಹಿಸಿ ಸದರಿಯವರು ವೇತನಕ್ಕೆ ಲೆಕ್ಕಾಚಾರ ಮಾಡಿ ಒದಗಿಸಿರುವ ಅನುದಾನ ಕೊರತೆಯಾಗುತ್ತದೆ. ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸದೆ ಲಭ್ಯವಿರುವ ಅನುದಾನದಿಂದ ವೇತನವನೆನ್ನು ಪಾವತಿಸುವುತ್ತಿರುವುದು ಸರಿಯಾದ ಕ್ರಮವಲ್ಲ. ಆದ್ದರಿಂದ ಬಾಕಿ ವೇತನವನ್ನು ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುದಾನ ಒದಗಿಸಿದ ನಂತರವೇ ಸೆಳೆಯತಕ್ಕದ್ದು. ವರ್ಗಾವಣೆಯಾಗಿ ಬಂದ ಸ್ಥಳದಲ್ಲಿ ಬಾಕಿ ವೇತನವನ್ನು ಸೆಳೆಯುವುದು ಸರಿಯಾದ ಕ್ರಮವಲ್ಲ. ಪ್ರಸ್ತುತ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾದ ಪೂರ್ವದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕಛೇರಿಗಳಲ್ಲೇ ಬಾಕಿ ವೇತನವನ್ನು ಸೆಳೆದು ತದನಂತರ ಪ್ರಸ್ತುತ ಸ್ಥಳದಲ್ಲಿ ವೇತನವನ್ನು ಸೆಳೆಯತಕ್ಕದ್ದು.

5. ಖಜಾನೆಗಳು ಈ ರೀತಿ ಡಿ.ಡಿ.ಓ.ಗಳು ಸಲ್ಲಿಸಿದ ವೇತನದ ಬಿಲ್ಲುಗಳನ್ನು 3 ದಿನಗಳೊಳಗೆ ತೀರ್ಣಗೊಳಿಸುವುದು/ಆಕ್ಷೇಪಣೆಗಳಿದ್ದಲ್ಲಿ ನೇರವಾಗಿ ಡಿ.ಡಿ.ಓ.ಗಳ ಗಮನಕ್ಕೆ ತಂದು ಹಿಂದಿರುಗಿಸುವುದು. ಖಜಾನೆ ಆಕ್ಷೇಪಣೆಗಳೊಂದಿಗೆ ಹಿಂದಿರುಗಿಸಲಾದ ಬಿಲ್ಲುಗಳ ಆಕ್ಷೇಪಣೆಗಳಿಗೆ ನಿಯಮಾನುಸಾರ ಸಮಜಾಯಿಷಿಯನ್ನು ನೀಡಿ ವೇತನ ಬಿಲ್ಲುಗಳು ಆದ್ಯತೆ ಮೇಲೆ ತೀರುವಳಿಗೊಳಿಸಿಕೊಳ್ಳತಕ್ಕದ್ದು. ಯಾವುದೇ ಕಾರಣಕ್ಕೂ ವಿಳಂಬಕ್ಕೆ ಆಸ್ಪದವೀಯಬಾರದು.

6. ಇತ್ತೀಚಿನ ದಿನಗಳಲ್ಲಿ ಖಜಾನೆ–2ರ ಬಿಲ್ಲುಗಳು ತೀರುವಳಿಗೊಳ್ಳುತ್ತಿಲ್ಲವೆಂದು ತಿಳಿಸಲಾಗುತ್ತಿದೆ. ಆದರೆ ಈ ಬಗ್ಗೆ ಖಜಾನೆ–2ರ ಗಮನಕ್ಕೆ ಯಾವುದೇ ಅಂಶಗಳನ್ನು ತರದಿರುವುದು ಕಂಡುಬರುತ್ತದೆ. ಖಜಾನೆ–2 ಪ್ರಕ್ರಿಯೆಯಲ್ಲಿ ಯಾವುದೇ ಸಮಸ್ಯೆಯಾದರೆ ಕೂಡಲೇ ಸಂಬಂಧಿಸಿದ ಡಿ.ಡಿ.ಓ.ಗಳು ಕೂಡಲೇ ಖಜಾನೆ–2ರ ಪ್ರಾಜೆಕ್ಟ್ ಡೈರೆಕ್ಟರ್ ರವರ ಅವಗಾಹನೆಗೆ ತಂದು ಸಮಸ್ಯೆಗಳನ್ನು ನಿವಾರಿಸಿಕೊಳ್ಳತಕ್ಕದ್ದು.

7. ಯಾವುದೇ ಕಾರಣಕ್ಕೂ ಬಿಡುಗಡೆಗೊಳಿಸಿದ ಅವಧಿಗೆ ಬಿಡುಗಡೆಗೊಳಿಸಿದ ಅನುದಾನದಲ್ಲಿ ಬಾಕಿ ಹಾಗೂ ವ್ಯತ್ಯಾಸದ ವೇತನವನ್ನು ಸೆಳೆಯದೆ ಪ್ರತಿ ತಿಂಗಳ ವೇತನ ಪಾವತಿಗೆ ಆದ್ಯತೆ ನೀಡತಕ್ಕದ್ದು, ತದನಂತರ ಅನುದಾನ ಲಭ್ಯವಿದ್ದಲ್ಲಿ ಮಾತ್ರ ಬಾಕಿ ವೇತನವನ್ನು ಸೆಳೆಯತಕ್ಕದ್ದು. ಇದನ್ನು ಉಲ್ಲಂಘಿಸಿದಲ್ಲಿ ಸಂಬಂಧಿಸಿದ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಶಿಸ್ತಿನ ಕ್ರಮಕ್ಕೆ ಕಾರಣರಾಗುತ್ತಾರೆ.
8. ಬಾಕಿ ವೇತನವನ್ನು ಸೆಳೆಯಲು ಅನುದಾನ ಲಭ್ಯವಿಲ್ಲದಿದ್ದಲ್ಲಿ ಸಿಒ/ಸಿಸಿಒ ಗಳಿಗೆ ತಿಳಿಸಿ ಹೆಚ್ಚಿನ ಅನುದಾನವನ್ನು ಮೇಲೆ ಹೇಳಲಾಗಿರುವ ಸುತ್ತೋಲೆ ಸಂಖ್ಯೆ: ಆಇ 321 ವೆಚ್ಚ 6/2019 ದಿನಾಂಕ:29.5.2019ರಲ್ಲಿನ ಅನುಬಂಧ–2ರ ನಿಗಧಿತ ನಮೂನೆಯಲ್ಲಿ ಅಗತ್ಯ ಮಾಹಿತಿ/ಸ್ಪಷ್ಟೀಕರಣ/ಲೆಕ್ಕಾಚಾರ ಪಟ್ಟಿಯೊಂದಿಗೆ ಪ್ರಸ್ತಾವನೆ ಸಲ್ಲಿಸಿ, ಹೆಚ್ಚುವರಿ ಅನುದಾನವನ್ನು ಪಡೆದ ನಂತರವೇ ಸೆಳೆಯತಕ್ಕದ್ದು.
9. ಹೆಚ್.ಆರ್.ಎಂ.ಎಸ್. ಕೋಶ ಪ್ರತಿ ತಿಂಗಳ ಎರಡನೇ ವಾರದೊಳಗೆ ಯಾವ ಹಣ ಸೆಳೆಯುವ ಅಧಿಕಾರಿಗಳು ವೇತನ ಬಿಲ್ಲುಗಳನ್ನು ತಯಾರಿಸಿರುವುದಿಲ್ಲ/ಖಜಾನೆಗೆ ಸಲ್ಲಿಸಿರುವುದಿಲ್ಲವೆಂಬ ಬಗ್ಗೆ ಮಾಹಿತಿಯನ್ನು ತಯಾರಿಸಿ ಸಲ್ಲಿಸತಕ್ಕದ್ದು ಈ ಆಧಾರದ ಮೇಲೆ ಯಾವ ನೌಕರರ ವೇತನವನ್ನು ಪಾವತಿಸಲಾಗಿಲ್ಲವೆಂಬ ಬಗ್ಗೆ ನೌಕರವಾರು ವರದಿಯನ್ನು ಆರ್ಥಿಕ ಇಲಾಖೆಯಲ್ಲಿ ಉಪಲಬ್ದವಾಗುವಂತೆ ಕ್ರಮವಹಿಸತಕ್ಕದ್ದು.

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಕಟ್ಟುನಿಟ್ಟಾಗಿ ಎಲ್ಲಾ ಸಿಒ/ಸಿಸಿಒ/ಡಿಡಿಒ ಗಳು ಕ್ರಮವಹಿಸಿ ಸರ್ಕಾರದ ಬಗ್ಗೆ ಸಾರ್ವಜನಿಕರಲ್ಲಿ ಹಾಗೂ ನೌಕರರುಗಳಲ್ಲಿ ಕೆಟ್ಟ ಅಭಿಪ್ರಾಯ ಹೊಂದದಂತೆ ಕ್ಲುಪ್ತ ವೇಳೆಯಲ್ಲಿ ವೇತನ ಬಿಲ್ಲುಗಳನ್ನು ತೀರುವಳಿಗೊಳಿಸತಕ್ಕದ್ದು ತಪ್ಪಿದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳೇ ಪೂರ್ಣ ಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಸಿದೆ.

(ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಆರ್ಥಿಕ ಇಲಾಖೆರವರಿಂದ ಅನುಮೋದಿತ)

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)
ವಿಶೇಷಾಧಿಕಾರಿ(ಜಿ.ಪಂ.)
ಆರ್ಥಿಕ ಇಲಾಖೆ.

ಗೆ,

1. ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿ.ಆ.ಸು.ಇ.(ಇ–ಆಡಳಿತ ಹೆಚ್.ಆರ್.ಎಂ.ಎಸ್), ಬಹುಮಹಡಿ ಕಟ್ಟಡ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ–2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು–9
4. ಪ್ರಾಜೆಕ್ಟ್ ಡೈರಕ್ಟರ್, ಖಜಾನೆ–2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು–9
5. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ನೆಲಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ:ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು–1
6. ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಹಾಗೂ ಅದರ ವ್ಯಾಪ್ತಿಯ ಎಲ್ಲಾ ಇಲಾಖೆಗಳ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು

7. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಇಲಾಖೆ,
8. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
9. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ ಮುಖ್ಯ ಲೆಕ್ಕಾಧಿಕಾರಿಗಳು/ಮುಖ್ಯ ಯೋಜನಾಧಿಕಾರಿಗಳು
10. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು
11. ರಕ್ಷಾ ಕಡತಕ್ಕೆ
12. ಹೆಚ್ಚುವರಿ ಪ್ರತಿ